


# ರೈತತೀರ್ಪು

**ಎರಡು ಸಾವಿರದ ಒಂಭತ್ತನೇ ಇಸವಿ ಡಿಸೆಂಬರ್ ಮಾಹೆಯ ಒಂದು, ಎರಡು ಮತ್ತು ಮೂರನೇ ದಿನದಂದು ಬೆಂಗಳೂರಿನ ಬಳಿಯಿರುವ ಫೈರ್‌ಫ್ಲೈಸ್ ಆಶ್ರಮದಲ್ಲಿ ರೈತತೀರ್ಪು ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಕರ್ನಾಟಕದ ಎಲ್ಲ ಪ್ರದೇಶಗಳನ್ನು, ವರ್ಗಗಳನ್ನು ಪ್ರತಿನಿಧಿಸಿರುವ ನಾವು 30 ಮಂದಿ ಸಣ್ಣ ರೈತರು, ರೈತ ಮಹಿಳೆಯರು, ರೈತ ಕಾರ್ಮಿಕರು ನ್ಯಾಯ ಮಂಡಳಿಯ ಸದಸ್ಯರಾಗಿ ರೈತ ಸಂಶೋಧನೆಗೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಪರಿಣಿತರ ವಾದಗಳನ್ನು ಆಲಿಸಿದ್ದೇವೆ. ಅವರ ವಾದಗಳನ್ನು ಆಲಿಸಿದ ಮೇಲೆ ದೇಶದ ಸಣ್ಣ, ಅತಿ ಸಣ್ಣ ರೈತರ, ರೈತ ಮಹಿಳೆಯರ, ಕೃಷಿ ಕಾರ್ಮಿಕರ ಹಿತದೃಷ್ಟಿಯಿಂದ ಕೃಷಿ ಸಂಶೋಧನೆಯಲ್ಲಿ ಅನೇಕ ಬದಲಾವಣೆಗಳು ಮತ್ತು ಸುಧಾರಣೆಗಳು ಆಗಬೇಕೆಂದು ನಮಗೆ ತೀವ್ರವಾಗಿ ಅನಿಸಿದೆ. ಈ ಹಿನ್ನೆಲೆಯಲ್ಲಿ ಸರಕಾರ, ನೀತಿನಿರೂಪಕರು, ವಿಶ್ವವಿದ್ಯಾಲಯಗಳು, ಕೃಷಿ ವಿಜ್ಞಾನಿಗಳು ಒಟ್ಟಾರೆ ದೇಶದ ಸಣ್ಣ ರೈತರ ಭವಿಷ್ಯದ ಬಗ್ಗೆ ಕಾಳಜಿಯುಳ್ಳ ಜನಸಮುದಾಯದ ಮುಂದೆ ಈ ದಿನ ಅಂದರೆ ದಿನಾಂಕ 5.12.2009ರಂದು ಬೆಂಗಳೂರಿನಲ್ಲಿ ಈ ಕೆಳಕಾಣಿಸಿದ ಶಿಫಾರಸುಗಳನ್ನು ಮಂಡಿಸುತ್ತಿದ್ದೇವೆ:**

1. ಇಂದಿನ ರೈತರು ಸಾಂಪ್ರದಾಯಿಕ ಒಕ್ಕಲುತನಕ್ಕೆ ಹಿಂತಿರುಗಲಾಗದೆ, ದುಬಾರಿ ಆಧುನಿಕ ಕೃಷಿಯನ್ನು ಮಾಡಲಾಗದೆ ಬಿದ್ದು ತೊಳಲಾಡುತ್ತಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತಪರ ಸಂಶೋಧನೆಗಳ ಅಗತ್ಯವಿದೆ.
2. ರೈತರ ಅನುಶೋಧನೆಗಳನ್ನು ಗಂಭೀರವಾಗಿ ಪರಿಗಣಿಸಿ, ಸರಕಾರವು ವಿಜ್ಞಾನಿಗಳಿಗೆ ಕೊಡುವಂತೆ ಅನುಶೋಧಕರಿಗೂ ನ್ಯಾಯಯುತ ಸಂಭಾವನೆ ನೀಡಿ ಅಗತ್ಯ ಮನ್ನಣೆ ನೀಡಬೇಕು. ಈ ಅನುಶೋಧನೆಗಳಿಗೆ ಸೂಕ್ತ ಪ್ರಚಾರ ಸಿಗಬೇಕು.
3. ಪದೇ ಪದೇ ಖರೀದಿಸಿ ತರಬೇಕಾದ ಹಾಗೂ ಹೆಚ್ಚು ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳನ್ನು ಬೇಡುವ ಹೈಬ್ರಿಡ್ ತಳಿ ಸಂಶೋಧನೆಗಳು ಬೇಡ. ಬದಲಿಗೆ ರೈತರೇ ಉತ್ಪಾದಿಸಬಹುದಾದ, ಪರಿಸರಕ್ಕೆ ಹೊಂದಿಕೊಳ್ಳುವ, ಬರನಿರೋಧಕ ಶಕ್ತಿ ಹೊಂದಿರುವ, ಉತ್ತಮವಾದ, ರುಚಿಯಲ್ಲೂ ಮುಂದಿರುವ ಆಹಾರ ಹಾಗೂ ಮೇವು ನೀಡುವ ಜವಾರಿ ತಳಿಗಳ ಮೇಲೆ ಸಂಶೋಧನೆ ನಡೆಯಲಿ.
4. ಸರಕಾರ, ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಸಹಭಾಗಿತ್ವದಲ್ಲಿ ನಡೆಸುವ ಸಂಶೋಧನೆಯ ಕುರಿತ ಮಾಹಿತಿಯನ್ನು ಪಾರದರ್ಶಕವಾಗಿ ರೈತರು ಪಡೆಯುವಂತಾಗಬೇಕು.
5. ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಇತರ ಸರಕಾರಿ ಸಂಶೋಧನಾ ಸಂಸ್ಥೆಗಳು ತಾವು ನಡೆಸುವ ಸಂಶೋಧನೆಗಳಲ್ಲಿ ರೈತರ ಸಹಭಾಗಿತ್ವಕ್ಕೆ ಅವಕಾಶ ನೀಡಬೆಕು. ಹಾಗೆಯೇ ಸಂಶೋಧನೆಯ ಲಾಭದಲ್ಲಿ ಸಮಪಾಲು ನೀಡಬೇಕು.
6. ಖಾಸಗಿ/ಬಹುರಾಷ್ಟ್ರೀಯ ಕಂಪನಿಗಳು ರೈತರ ಜಮೀನುಗಳಲ್ಲಿ ಅಥವಾ ತಮ್ಮದೇ ಜಮೀನುಗಳಲ್ಲಿ ಬೀಜೋತ್ಪಾದನೆ/ಪ್ರಯೋಗ ಮಾಡುವಾಗ 1) ರೈತರ ಆರೋಗ್ಯ 2) ಮಣ್ಣಿನಲ್ಲಾಗುವ ಬದಲಾವಣೆ, 3) ಪರಿಸರದ ಸುತ್ತಮುತ್ತಲೂ ಆಗುತ್ತಿರುವ ಪರಿಣಾಮಗಳನ್ನು ಕೃಷಿ ಇಲಾಖೆ ಹಾಗೂ ನಾಗರೀಕ ಗುಂಪುಗಳು (ರೈತರು ಒಳಗೊಂಡಂತೆ) ಪರಿಶೀಲನೆ ಮಾಡಿ, ಈ ಕುರಿತ ಮಾಹಿತಿಯನ್ನು ಪ್ರತಿವರ್ಷ ಮಾಧ್ಯಮಗಳು ಹಾಗೂ ಗ್ರಾಮಸಭೆಗಳ ಮೂಲಕ ರೈತ ಸಮುದಾಯಕ್ಕೆ ತಿಳಿಸಬೇಕು. ವ್ಯತಿರಿಕ್ತ ಪರಿಣಾಮಗಳು ಬಂದಲ್ಲಿ ಆ ಕಂಪನಿಗಳನ್ನೇ ಜವಾಬ್ದಾರಿಗಳನ್ನಾಗಿ ಮಾಡಿ, ಹೊಣೆಗಾರರನ್ನಾಗಿ ಮಾಡಬೇಕು.
7. ಪ್ರತಿ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಬೇರೆ ಬೇರೆ ಬೆಳೆಗಳಿಗೆ ಸಂಬಂಧಪಟ್ಟಂತೆ ಸಣ್ಣ ರೈತರ ಜಮೀನಿನಲ್ಲಿ ಇಲಾಖೆಯು ನಡೆಸುವ ಪ್ರಾತ್ಯಕ್ಷಿಕೆಗಳು ಮತ್ತು ರೈತ ಪಾಠಶಾಲೆಗಳು ರಾಜ್ಯವ್ಯಾಪಿ ನಡೆಯುವಂತೆ ವ್ಯವಸ್ಥೆ ಆಗಬೇಕು.
8. ಕೃಷಿ ತಂತ್ರಜ್ಞಾನ ಹಾಗೂ ಸಂಶೋಧನೆ ಕುರಿತ ಮಾಹಿತಿ ರೈತರಿಗೆ ಅರ್ಥವಾಗುವಂತೆ ಸ್ಥಳೀಯ ಭಾಷೆಯಲ್ಲಿ ಸರಳವಾಗಿ ಸಿಗುವಂತಿರಬೇಕು.
9. ಕರ್ನಾಟಕದ ಪ್ರಮುಖ ಬೆಳೆಗಳಲ್ಲೊಂದಾದ ಕಬ್ಬು ಬೆಳೆ ಬಗ್ಗೆ ಸಾಕಷ್ಟು ಸಂಶೋಧನೆ ನಡೆಯುತ್ತಿಲ್ಲ. ಕಬ್ಬು ಬೆಳೆ ಅಭಿವೃದ್ಧಿ ಹಾಗೂ ವ್ಯವಸಾಯದ ಕುರಿತು ಹೆಚ್ಚಿನ ಸಂಶೋಧನೆಗಾಗಿ ಕಬ್ಬು ಸಂಶೋಧನಾ ಕೇಂದ್ರ ಬೇಕು.






10. ನಿರ್ದಿಷ್ಟ ಪ್ರದೇಶದಲ್ಲಿ ನಿಖರವಾಗಿ ಮಳೆಬೀಳುವ, ಬೀಳದಿರುವ ಹಾಗೂ ಅತಿವೃಷ್ಟಿ, ಅನಾವೃಷ್ಟಿ ಆಗುವ ಬಗ್ಗೆ ವೈಜ್ಞಾನಿಕ ಮುನ್ಸೂಚನೆ ಕೊಡುವಂತಾಗಬೇಕು. ಈ ಮಾಹಿತಿ ರೈತರಿಗೂ ಸಿಗುವಂತಾಗಬೇಕು.
11. ನೀರು ಹಾಗೂ ಮಣ್ಣು ಪರೀಕ್ಷೆ ಸೌಲಭ್ಯ ಸಣ್ಣ ರೈತರಿಗೆ ಸುಲಭವಾಗಿ ಸಿಗುವಂತಾಗಲು ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರಗಳು ಬೇಕು.
12. ಹವಾಮಾನ ಆಧಾರಿತ ಬೆಳೆ ವಿಮೆ ಪದ್ಧತಿ ರದ್ದು ಮಾಡಿ ಪ್ರತಿಯೊಂದು ಹೊಲವನ್ನೇ ಒಂದು ಘಟಕವನ್ನಾಗಿ ಮಾಡಿ ಆಗಿರುವ ನಷ್ಟವನ್ನು ಪರಿಶೀಲಿಸಿ ಸೂಕ್ತ ಪರಿಹಾರ ನೀಡುವ ವ್ಯವಸ್ಥೆ ಆಗಬೇಕು.
13. ರೈತ ಸಮುದಾಯದ ಮತ್ತು ಸರಕಾರದ ಸಹಭಾಗಿತ್ವದಲ್ಲಿ ಹೋಬಳಿ ಮಟ್ಟದಲ್ಲಿ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆಗಾಗಿ ಗುಡಿಕೈಗಾರಿಕೆಗಳ ಸ್ಥಾಪನೆ ಮಾಡಬೇಕು. ಗುಡಿ ಕೈಗಾರಿಕೆಗಳು ಸ್ಥಳೀಯ ಸನ್ನಿವೇಶ ಆಧಾರಿತ ಕೃಷಿ ಉತ್ಪನ್ನಗಳಿಗೆ ಜೋಡಣೆ ಆಗಿರಬೇಕು. ಬಂಡವಾಳ ಹೂಡಿಕೆ ಸರಕಾರದ್ದಾಗಿರಬೇಕು.
14. ಗ್ರಾಮಪಂಚಾಯತ್ ಮಟ್ಟದಲ್ಲಿ ದೇಸಿ ಬೀಜಬ್ಯಾಂಕ್ ಸ್ಥಾಪನೆ ಹಾಗೂ ಅವುಗಳ ಮೂಲಕ ಬೀಜಗಳ ವಿತರಣೆ, ಬೀಜಮೇಳ, ಪ್ರಾತ್ಯಕ್ಷಿಕೆ, ತಳಿ ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳು ನಡೆಯಬೇಕು.
15. ರೈತವಿರೋಧಿಯಾದ ಬೀಜ ಕಾನೂನುಗಳು ಬೇಡ.
16. ದೇಶದ ಜನಸಂಖ್ಯೆಯಲ್ಲಿ ಎಪ್ಪತ್ತು ಪ್ರತಿಶತ ಇರುವ, ಒಟ್ಟಾರೆ ಆರ್ಥಿಕ ವ್ಯವಸ್ಥೆಗೆ ಬಹುಮುಖ್ಯ ಕೊಡುಗೆ ನೀಡುವ ಕೃಷಿರಂಗಕ್ಕೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರತ್ಯೇಕವಾದ ಆಯವ್ಯಯ (ಬಡ್ಜೆಟ್) ಮಂಡಿಸಬೇಕು.
17. ದನಕರು, ಕುರಿಗಳಿಗೆ ಮೇಯಿಸಲು ಮೀಸಲಾಗಿಟ್ಟಿದ್ದ ಗೋಮಾಳಗಳು ಹಾಗೂ ಕೆರೆಗಳು ಈಗ ಇಲ್ಲವಾಗಿವೆ. ಅವು ಮತ್ತೆ ಸಮುದಾಯಕ್ಕೆ ಲಭ್ಯವಾಗುವಂತೆ ಮಾಡಬೇಕು.
18. ಹೊಸತಲೆಮಾರಿನ ಮಕ್ಕಳಿಗೆ ಕೃಷಿ ಬದುಕಿನ ಬಗ್ಗೆ ಆಸಕ್ತಿ ಹುಟ್ಟಿಸಲು, ವಿವರ ತಿಳಿಯುವಂತಾಗಲು ಶಾಲಾ ಪಠ್ಯದಲ್ಲಿ ಕೃಷಿ ವಿಷಯವನ್ನೂ ಅಳವಡಿಸಬೇಕು.
19. ವಿಶೇಷ ವಿತ್ತವಲಯ ಹಾಗೂ ಅಭಿವೃದ್ಧಿಯ ನೆಪದಲ್ಲಿ ಕೃಷಿಭೂಮಿಯನ್ನು ರೈತರಿಂದ ಕಿತ್ತುಕೊಳ್ಳಬಾರದು.
20. ಅರಣ್ಯ ಇಲಾಖೆ ತನ್ನ ಭೂಮಿಯಲ್ಲಿ ಅಕೇಶಿಯಾ, ನೀಲಗಿರಿ ಮುಂತಾದ ಗಿಡಗಳನ್ನು ರೈತರಿಗೆ ಉಚಿತವಾಗಿ ಹಂಚುವುದನ್ನು ನಿಲ್ಲಿಸಬೇಕು. ಅಂತರ್ಜಲ ಮಟ್ಟ ಕುಸಿಯಲು ಕಾರಣವಾದ, ಪರಿಸರಕ್ಕೆ ಮಾರಕವಾದ ಇವನ್ನು ಏಕಬೆಳೆಯಾಗಿ ನೆಡುವ ಬದಲು ನೆಲ–ಜಲ ಸಂರಕ್ಷಿಸುವ, ಪರಿಸರಕ್ಕೆ ಹಾಗೂ ಪ್ರಾಣಿ, ಪಕ್ಷಿ, ಮನುಷ್ಯರಿಗೆ ಅಗತ್ಯವಿರುವ ಗಿಡ ಮರಗಳನ್ನು ಬೆಳೆಸಬೇಕು.
21. ಕೃಷಿನೀತಿಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಸಣ್ಣ ರೈತರು, ಕೃಷಿ ಕಾರ್ಮಿಕರು, ಬಡಗಿ, ಕುಂಬಾರ ಇತ್ಯಾದಿ ಕೃಷಿಗೆ ಪೂರಕ ಉದ್ಯಮಗಳ ಸಮುದಾಯಗಳನ್ನು ಸೇರಿಸಿಕೊಂಡು ಸನ್ನಿವೇಶಾಧಾರಿತ ಕೃಷಿ ನೀತಿಯನ್ನು ರೂಪಿಸಬೇಕು.
22. ಕರ್ನಾಟಕ ಕುರಿ ಅಭಿವೃದ್ಧಿ ಮಂಡಳಿಯಲ್ಲಿ ಹಾಗೂ ನೀತಿನಿರೂಪಣೆಯಲ್ಲಿ ಕುರಿಗಾಹಿಗಳಿಗೆ ಪ್ರಾತಿನಿಧ್ಯ ಬೇಕು.

## ನ್ಯಾಯಮಂಡಳಿಯ ಸದಸ್ಯರು:

1. ಅಜ್ಜಮ್ಮ ಬಿ. ಇಲ್ಲೆಪ್ಪನವರ್
2. ಈರಯ್ಯ ಕಿಲ್ಲೇದಾರ
3. ಕಲ್ಲವ್ವ ಎಮ್. ಹಕ್ಲದ್
4. ಗಂಗಮ್ಮ ಪುಟ್ಟರಸಯ್ಯ
5. ಚಿಕ್ಕಬೋರೇಗೌಡ
6. ಚಿತ್ತಪ್ಪ ಎಸ್. ಗುಡ್ಡಗೊಲ್ಲರಹಳ್ಳಿ
7. ಜಯತಾನುಬಿ ಪೀರ್‌ಸಾಬ್ ನಡಾಫ್
8. ತಳವಾರ ಅಜ್ಜಪ್ಪ
9. ಎಮ್.ಟಿ. ಶಾಂತಿಮೂಲೆ
10. ಮಾರುತಿ ಟಿ. ಕಾಂಬ್ಳೆ
11. ಮಾರುತಿ ನಿಂಗಪ್ಪ ಹೊಸಮನಿ
12. ಮುನಿಯಮ್ಮ ಇ. ವರದಯ್ಯ
13. ರುದ್ರಪ್ಪ ಎಮ್. ಝುಲಾಫಿ
14. ಲಕ್ಷ್ಮೀಬಾಯಿ ಎಮ್. ಕಾಂಬ್ಳೆ
15. ಲಕ್ಷ್ಮಮ್ಮ ಎನ್. ದೊಡ್ಡಬಳ್ಳಾಪುರ
16. ಲಕ್ಷ್ಮಿ ಸಿದ್ಧಿ
17. ಲಲಿತವ್ವ ಈರಪ್ಪ ಹೊಸಹಳ್ಳಿ
18. ಲಲಿತಾ ಜಿ. ಭಟ್
19. ಶಿವಗಂಗಮ್ಮ ಬಿ. ಹೊಸಮನಿ
20. ಶಿವಮ್ಮ ಆರ್.
21. ಶೋಭಾವತಿ ಆರ್. ತುಗಾವೆ
22. ಎಸ್.ಎಂ. ಗುರುಲಿಂಗಯ್ಯ
23. ಸದಾಶಿವಯ್ಯ
24. ಸಾಮವ್ವ ಸಾಯಬಣ್ಣ ಇಣಚಕಲ್
25. ಸಿದ್ದರಾಜಪ್ಪ
26. ಸುಮಿತ್ರವ್ವ ಕೆ. ನಾಯಕ
27. ಹಚ್ಚೆ ಗೌಡ
28. ಹೇಮವ್ವ ಟಿ. ಲಮಾಣಿ
29. ಹೊಯ್ಸಳ ಎಸ್. ಅಪ್ಪಾಜಿ
30. ಹೊಂಬಯ್ಯ

